## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ.ಡಿ.ಬಿ.ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು, ಇವರ ವರ್ಗಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:6663/2013ರಲ್ಲಿ ನೀಡಿದ ಆದೇಶ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃಇ 77 ಕೃಪವ 2013, ದಿನಾಂಕ:31–08–2013.
2. ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 6663/2013ರಲ್ಲಿ ದಿನಾಂಕ:09–10–2013 ರಂದು ನೀಡಿದ ಮಧ್ಯಂತರ ತೀರ್ಪು ಹಾಗೂ ದಿನಾಂಕ: 20–08–2014ರಂದು ನೀಡಿದ ಆದೇಶ.

**ಪ್ರಸ್ತಾವನೆ:–**

ಮೇಲೆ (1)ರಲ್ಲಿ ಓದಲಾದ ದಿನಾಂಕ:31–08–2013ರ ಸರ್ಕಾರದ ಅಧಿಸೂಚನೆಯಲ್ಲಿ ಶ್ರೀ ಡಿ.ಬಿ. ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು, ಇಂಡಿ ಇವರನ್ನು ಸಹಾಯಕ ಕೃಷಿ ನಿರ್ದೇಶಕರು, ಸುರಪುರ ಹುದ್ದೆಗೆ ವರ್ಗಾಯಿಸಲಾಗಿತ್ತು.

2) ಶ್ರೀ. ಡಿ.ಬಿ. ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು, ಇವರು ಮೇಲ್ಕಂಡ ವರ್ಗಾವಣೆ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 6663/2013ರಲ್ಲಿ ಅರ್ಜಿ ಸಲ್ಲಿಸಿದ್ದರು. ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಮೇಲೆ (2)ರಲ್ಲಿ ಓದಲಾದ ದಿನಾಂಕ:09–10–2013ರ ಮಧ್ಯಂತರ ತೀರ್ಪಿನಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ;

> ***"The Transfer of the applicant to Surpur made in Notification bearing No. ಕೃಇ 77 ಕೃಪವ 2013, ದಿನಾಂಕ: 31–08–2013 (Ann-A4) is stayed for a period of four months or until the disposal of the application, Whichever is earlier, and it is further ordered that during the period of stay, the applicant shall be continued as Assistant Director of Agriculture, Indi Talak of Bijapur District".***

3) ನಂತರ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ:20–08–2014ರ ಅಂತಿಮ ತೀರ್ಪಿನಲ್ಲಿ ಶ್ರೀ. ಡಿ.ಪಿ. ಭಜಂತ್ರಿಯವರನ್ನು ಸಹಾಯಕ ಕೃಷಿ ನಿರ್ದೇಶಕರು, ಸುರಪುರ, ಹುದ್ದೆಗೆ ವರ್ಗಾಯಿಸಿರುವ ವರ್ಗಾವಣೆ ಆದೇಶವನ್ನು ವಜಾಗೊಳಿಸುತ್ತಾ, ಅರ್ಜಿದಾರರ ವರ್ಗಾವಣೆಯು ಅವಶ್ಯಕವೆನಿಸಿದಲ್ಲಿ, ವರ್ಗಾವಣಾ ಮಾರ್ಗಸೂಚಿಗಳನ್ವಯ ಅವರನ್ನು ವರ್ಗಾಯಿಸಬಹುದಾದ ಸ್ವಾತಂತ್ರ್ಯವನ್ನು ನೀಡಿ ಆದೇಶಿಸಿದೆ.

--2—

4) ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ:09-10-2013 ರಂದು ನೀಡಿದ ಮಧ್ಯಂತರ ಹಾಗೂ ದಿನಾಂಕ:20-08-2014ರ ಅಂತಿಮ ಆದೇಶದನ್ವಯ ಪರಿಶೀಲಿಸಿ, ಶ್ರೀ. ಡಿ.ಬಿ. ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು, ಇವರು ನ್ಯಾಯಮಂಡಳಿಯ ತಡೆಯಾಜ್ಞೆಯನ್ವಯ ಸಹಾಯಕ ಕೃಷಿ ನಿರ್ದೇಶಕರು, ಇಂಡಿ, ಇಲ್ಲಿಯೇ ಮುಂದುವರೆದಿರುವುದರಿಂದ ಹಾಗೂ ಅರ್ಜಿದಾರರು ದಿನಾಂಕ:31-12-2014ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದನ್ನು ಪರಿಶೀಲಿಸಿದ. ಸರ್ಕಾರವು ಇವರನ್ನು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಹುದ್ದೆಯಲ್ಲಿಯೇ ಮುಂದುವರೆಸಲು ನಿರ್ಧರಿಸಿದೆ, ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 76 ಕೃಪರಿ 2013, ಬೆಂಗಳೂರು, ದಿನಾಂಕ: 22-01-2015.**

5) ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃಇ 77 ಕೃಪವ 2013, ದಿನಾಂಕ:31-08-2013ರಲ್ಲಿ ಶ್ರೀ ಡಿ.ಬಿ. ಭಜಂತ್ರಿ, ಇವರನ್ನು ಸಹಾಯಕ ಕೃಷಿ ನಿರ್ದೇಶಕರು, ಸುರಪುರ ಹುದ್ದೆಗೆ ವರ್ಗಾಯಿಸಿರುವ ಆದೇಶವನ್ನು ಮಾರ್ಪಡಿಸಿ, ಸಹಾಯಕ ಕೃಷಿ ನಿರ್ದೇಶಕರು, ಇಂಡಿ ಹುದ್ದೆಯಲ್ಲಿಯೇ ಅವರು ಸೇವೆಯಿಂದ ವಯೋನಿವೃತ್ತಿ ಹೊಂದಿರುವ ದಿನಾಂಕದವರೆಗೆ ಅಂದರೆ ದಿನಾಂಕ:31-12-2014ರವರೆಗೆ ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು(ಲೆಕ್ಕ ಪತ್ರ ಮತ್ತು ಲೆಕ್ಕ ನಿರ್ವಹಣೆ) ಹೊಸಕಟ್ಟಡ, ಬೆಂಗಳೂರು-1.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಜಂಟಿ ಕೃಷಿ ನಿರ್ದೇಶಕರು, ಬಿಜಾಪುರ.
4. ಸಂಬಂಧಪಟ್ಟ ಅಧಿಕಾರಿಗಳಿಗೆ (ಕೃಷಿ ಆಯುಕ್ತರ ಮೂಲಕ).
5. ಶಾಖಾ ರಕ್ಷಾ ಕಡತ/ಅಂತಾರ್ಜಾಲ ತಾಣ/ ಹೆಚ್ಚುವರಿ ಪ್ರತಿ.